**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ18-12-2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಕುಮಾರಿ ಪಿ ಕೆ ವಕೀಲರಿಂದಃ**

ಸಂತೋಷ ಬಿನ್ ನರಸಿಂಹರವರ ಪರಿಚಯವಿರುವುದಿಲ್ಲ. ನಾನು ಆಟೋ ಕುಮಾರ ರವರ ವಿರುದ್ದ ಸಕಲೇಶಪುರ ನಗರ ಠಾಣೆಯಲ್ಲಿ ಒಂದು ದೂರು ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದೂರಿನಲ್ಲಿ ನಾನು ಸಂತೋಷ ಬಿನ್ ನರಸಿಂಹರವರನ್ನು ಸಾಕ್ಷಿದಾರರಾಗಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 1 ಚೆಕ್ ವ್ಯವಹಾರ ಆರೋಪಿಯ ಗಂಡ ಮತ್ತು ಸಂತೋಷ ರವರ ನಡುವೆಯಾದ ವ್ಯವಹಾರ ಎಂದರೆ ಸರಿಯಲ್ಲ. ಸಂತೋಷ ಮತ್ತು ಆರೋಪಿಯ ಗಂಡ ಸುರೇಶ್ ರವರ ನಡುವೆ ಪಿಕ್ಆಫ್ ಶೋರೂಂ ಸಲುವಾಗಿ ವ್ಯವಹಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರದಲ್ಲಿ ಸಂತೋಷ ರವರು ಸುರೇಶ ರವರ ಸಹಿಯನ್ನು ನಕಲು ಮಾಡಿ ಪಿಕ್ ಆಫ್ ವಾಹನ ಖರೀದಿ ಮಾಡಿರುತ್ತಾರೆ ಎಂದರೆ ಸಂತೋಷ ಎಂದರೆ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಂತೋಷ ರವರು ಸುರೇಶ ರವರ ಹೆಸರಿನಲ್ಲಿ ಚೋಳ ಫೈನಾನ್ಸ ನಲ್ಲಿ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಸಾಲ ಬಾಕಿ ಇರುವುದರಿಂದ ಸುರೇಶ ರವರಿಗೆ ನೋಟೀಸ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಲುವಾಗಿ ಸುರೇಶ ರವರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು ಎಂದರೆ ಗೊತ್ತಿಲ್ಲ. ಪಿಕ್ ಆಫ್ ವಾಹನವನ್ನು ಫೈನಾನ್ಸ ರವರು ತೆಗೆದುಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ಸುರೇಶ ಮತ್ತು ಸಂತೋಷ ರವರ ನಡುವೆ ಆ ಸಲುವಾಗಿ ಮನಸ್ಥಾಪವಾಗಿ ಜಗಳವಾಗಿ ಸುರೇಶ ರವರ 4 ಚೆಕ್ ಗಳನ್ನು ಸಂತೋಷ ರವರು ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸುರೇಶ ರವರು ಸದರಿ 4 ಚೆಕ್ ಗಳ ಸಲುವಾಗಿ ದೂರು ಸಹ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಸುರೇಶ ರವರು ದಿಃ 13.01.2023 ರಲ್ಲಿ ಬ್ಯಾಂಕ್ ಗೆ ಸಹ ದೂರು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ.

ಉಮೇಶ ಎಂದರೆ ಯಾರು ಎಂದು ಗೊತ್ತಿಲ್ಲ. ನಾನು ಕಳುಹಿಸಿದ ನೋಟೀಸ್ ನ್ನು ಯಾರು ಸ್ವೀಕರಿಸಿರುತ್ತಾರೆ ಎಂದು ಗೊತ್ತಿಲ್ಲ. ನಾನು ಕಳುಹಿಸಿದ ನೋಟೀಸ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನೋಟೀಸ ಜಾರಿಯಾಗಿದ್ದರೆ ಅವರು ಉತ್ತರ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ದಿಃ 14.02.2023ರಂದು

ನೋಟೀಸಿ ಕಳುಹಿಸಿರುತ್ತೇನೆ. ನಾನು ಅಂಚೆ ಕಚೇರಿಯವರ ಬಳಿ ಶಾಮೀಲಾಗಿ ಆರೋಪಿಗೆ ನೋಟೀಸ್ ತಲುಪದ ಹಾಗೇ ಮಾಡಿರುತ್ತೇನೆಂದರೆ ಸರಿಯಲ್ಲ.

ನಾನು 2018 ರಲ್ಲಿ ನನ್ನ ಗಂಡನ ವಿರುದ್ದ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಗಂಡನ ವಿರುದ್ದ ವಾರೆಂಟ್ ಸಹ ಹೊರಡಿಸಿರುತ್ತಾರೆ ಎಂದರೆ ಸರಿ. 2022 ರಲ್ಲಿ ನಾನು ಆರೋಪಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸ್ನೇಹಿತ ಸಂತೋಷ ರವರು ವಾಹನ ಖರೀದಿ ಸಲುವಾಗಿ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸಂತೋಷ ಮತ್ತು ಸುರೇಶ ರವರ ನಡುವಿನ ಮನಸ್ಥಾಪದಲ್ಲಿ ಸಂತೋಷ ರವರು ನನ್ನ ಮೂಲಕ ಆರೋಪಿ ವಿರುದ್ದ ಈ ಸುಳ್ಳು ಕೇಸನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**